ಪುನರ್ವಸತಿ ಅಧಿಕಾರಿಗಳ ಕಾರ್ಯಾಲಯ, ಕೃ.ಮೇ.ಯೋ. ಬೀಳಗಿ, ಜಿಲ್ಲೆ: ಬಾಗಲಕೋಟ

# ಸುನಗ ಗ್ರಾಮದ ಕೆಲವು ಜಮೀನುಗಳು ರೊಳ್ಳಿ-ಮನ್ನಿಕೇರಿ ಏತ ನೀರಾವರಿ ಯೋಜನೆಯ ಡೆಲೆವರಿ ಚೇಂಬರ ನಂ. 2 ರ ಕಾಲುವೆ ನಿರ್ಮಾಣಕ್ಕಾಗಿ ಜಮೀನು ಭೂ ಸ್ವಾಧೀನಪಡಿಸಿಕೊಳ್ಳುವ ಜಮೀನು ಮಾಲೀಕರುಗಳ ಕುಟುಂಬಗಳ ಗಣತಿ ವಿವರಗಳು

ಕರ್ನಾಟಕ ಸರ್ಕಾರ

ಕೃಷ್ಣಾ ಮೇಲ್ದಂಡೆ ಯೋಜನೆ

ಕ್ರಮಾಂಕ:ವಿಜಿಬಾ:ಭೂಸ್ವಾ:ಸಿಆರ್: /2016–17

ದಿನಾಂಕ: 21/12/2016

ಬೀಳಗಿ ತಾಲೂಕಿನ ಸುನಗ ಗ್ರಾಮದ ಕೆಲವು ಜಮೀನುಗಳು ರೊಳ್ಳಿ–ಮನ್ನಿಕೇರಿ ಏತ ನೀರಾವರಿ ಯೋಜನೆಯ ಡೆಲೆವರಿ ಚೇಂಬರ ನಂ. 2 ರ ಕಾಲುವೆ ನಿರ್ಮಾಣಕ್ಕಾಗಿ ಭೂ ಸ್ವಾಧೀನಪಡಿಸಿಕೊಳ್ಳುತ್ತಿರುವ ಸುನಗ ಗ್ರಾಮದ ಜಮೀನುಗಳ ಮಾಲೀಕರಿಗಾಗಿ ಪುನರ್ವಸತಿ ಹಾಗೂ ಪುನರ್‌ನಿರ್ಮಾಣ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ 2013" (The Right Fair Compensation, Transparency in Land Acquisition Rehabilitation and Resettlement Act-2013)

ಕಲಂ 16(2) ರನ್ವಯ ಪುನರ್ ವಸತಿ ಹಾಗೂ ಪುನರ್ ವ್ಯವಸ್ಥೆಯ ಕರಡು ಯಾದಿ

ಜಿಲ್ಲೆ: ಬಾಗಲಕೋಟ ತಾಲೂಕು: ಬೀಳಗಿ ಗ್ರಾಮ: ಸುನಗ ಹೋಬಳಿ: ಬೀಳಗಿ

---

ಪ್ರಸ್ತಾವನೆ:

1) ಜನರಿಗೆ ಪುನರವಸತಿ ಮತ್ತು ಪುನರವ್ಯವಸ್ಥೆಯ ಕರಡು ಪರಿ ಯೋಜನೆ ಕುರಿತು ನಿಯಮಗಳಲ್ಲಿ ಉಪಬಂಧಿಸುವ ರೀತಿಗಳಲ್ಲಿ ಅರಿವು ಮೂಡಿಸಲಾಗಿದೆ.

2) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರವಸತಿ ಮತ್ತು ಪುನರ ವ್ಯವಸ್ಥೆ ಅಧಿನಿಯಮ 2013 ರನ್ವಯ ಕಲಂ 11(1) ರಲ್ಲಿ 08–09–2015 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿರುತ್ತದೆ.

3) ಪುನರವಸತಿ ಪುನರವ್ಯವಸ್ಥೆಯ ಈ ಕರಡು ಯಾದಿಯನ್ನು ಸರ್ವೇ (ಸಂಯುಕ್ತ ಮೋಜಣಿ ಸರ್ವೇ) ಗಣತಿಯ ಸಮೀಕ್ಷಾ ವರದಿ, ವಂಶಾವಳಿ ಮತ್ತು ಕಲಂ 11(1) ರ ಅಧಿಸೂಚನೆಯ ಪ್ರಕಟಣೆಯನ್ನು ಆಧಾರವಾಗಿ ಇಟ್ಟುಕೊಂಡು ತಯಾರಿಸಲಾಗಿದೆ.

4) ಸದರಿ ಭೂಸ್ವಾಧೀನಕ್ಕೆ ಒಳಪಡುವ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಸರ್ಕಾರಿ ಕಟ್ಟಡಗಳು ಒಳಪಟ್ಟಿರುವುದಿಲ್ಲ.

5) ಈ ಕರಡು ಯಾದಿಯು ಕಲಂ 16, 16(4), 16(5) ರನ್ವಯ ಕ್ಲೇಮು ಹಾಗೂ ಆಕ್ಷೇಪಣೆಗಳ ಕುರಿತು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಂದರ್ಭನುಸಾರ ಬದಲಾವಣೆಗೆ ಒಳಪಟ್ಟಿರುತ್ತದೆ.

6) ಬೀಳಗಿ ತಾಲೂಕಿನ ಸುನಗ ಗ್ರಾಮದ ಕೆಲವು ಜಮೀನುಗಳು ರೊಳ್ಳಿ–ಮನ್ನಿಕೇರಿ ಏತ ನೀರಾವರಿ ಯೋಜನೆಯ ಡೆಲಿವರಿ ಚೇಂಬರ ನಂ.2 ರ ಕಾಲುವೆ ನಿರ್ಮಾಣಕ್ಕಾಗಿ ಸುನಗ ಗ್ರಾಮದ ಜಮೀನುಗಳು ಬಾದಿತಗೊಳ್ಳುವ ಕುಟುಂಬಗಳಿಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಪುನರವಸತಿ ಮತ್ತು ಪುನರ ವ್ಯವಸ್ಥೆ ಅಧಿನಿಯಮ 2013 (The Right Fair Compensation, Transparency in Land Acquisition Rehabilitation and Resettlement Act-2013) ಸದರಿ ಅಧಿನಿಯಮದ ಅನುಸೂಚಿ 2 ರ ಅನುಸಾರ ಹಾಗೂ ಕಲಂ 31 ರ ರನ್ವಯ ಪುನರವಸತಿ ಹಾಗೂ ಪುನರ್ ವ್ಯವಸ್ಥೆಯ ಐತೀರ್ಪು ರಚಿಸಲಾಗುವುದು ಎಂದು ಉದ್ದೇಶಿಸಲಾಗಿದೆ.

7) ಸುನಗ ಗ್ರಾಮದ ಸದರಿ ಪ್ರಕರಣದ ಕಲಂ 11(1) ರ ಅಧಿಸೂಚನೆಯ ಅನ್ವಯ ಭೂ ಸ್ವಾಧೀನಕ್ಕೆ ಒಳಪಡುವ ಕ್ಷೇತ್ರವು **100 ಎಕರೆಗಿಂತ ಕಡಿಮೆ** ಇರುವುದರಿಂದ ಹೊಸ ಭೂ ಸ್ವಾಧೀನ ಕಾಯ್ದೆಯ ಕಲಂ 45 ರ ನಿಬಂಧನೆಗಳು ಅನ್ವಯಿಸುವುದಿಲ್ಲ.

8) ಸರಕಾರವು ಕಾಲ ಕಾಲಕ್ಕೆ ಹೊರಡಿಸುವ ಕಾಯ್ದೆ, ಕಾನೂನು ನಿಯಮಗಳ ಅನ್ವಯ ಸದರಿ ಕರಡು ಯಾದಿಯು ಬದಲಾವಣೆಗೆ ಒಳಪಟ್ಟಿರುತ್ತದೆ.

9) ಭೂ ಸ್ವಾಧೀನಕ್ಕೆ ಒಳಪಡುವ ಜಮೀನುಗಳು ವಹಿವಾಟುಗಳ ಪ್ರಕಾರ ಪೋಡಿಯಾಗಬೇಕಾಗಿದ್ದಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಭೂ ಮಾಲೀಕರು ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಹಾಜರಪಡಿಸಬೇಕು.